ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2778\2017\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 30/06/2018

ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಶಿವಮೊಗ್ಗ ಜಿಲ್ಲೆ ಭ್ರಷ್ಟಾಚಾರ ನಿಗ್ರಹ ದಳದ ಆರಕ್ಷಕ ಉಪಾಧೀಕ್ಷಕರಾದ ಶ್ರೀ.ಎ.ಚಂದ್ರಪ್ಪ ರವರ ದುರ್ನಡತೆಯ ಬಗ್ಗೆ.

**********

ದಾವಣಗೆರೆ ಜಿಲ್ಲೆ ಹರಪನಹಳ್ಳಿ ಪಟ್ಟಣ ನೇವಾರ ಕೇರಿಯ ನಿವಾಸಿಯಾದ ಶ್ರೀ.ಎನ್.ಎಸ್.ರಾಮಮೂರ್ತಿ ಬಿನ್ ಶ್ರೀನಿವಾಸಮೂರ್ತಿ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ಭ್ರಷ್ಟಾಚಾರ ನಿಗ್ರಹ ದಳದ ಆರಕ್ಷಕ ಉಪಾಧೀಕ್ಷಕರಾದ ಶ್ರೀ.ಎ.ಚಂದ್ರಪ್ಪ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅಕ್ರಮ ಆಸ್ತಿ ಸಂಪಾದನೆಯ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಎದುರುದಾರರು 1994ರಲ್ಲಿ ಸರ್ಕಾರಿ ಕೆಲಸಕ್ಕೆ ಸೇರಿದ್ದು, ಸದರಿಯವರು ಒಟ್ಟು ಹತ್ತು ಕೋಟಿ ರೂಪಾಯಿ ಬೆಲೆ ಬಾಳುವ ಅಕ್ರಮ ಆಸ್ತಿಯನ್ನು ಗಳಿಸಿರುತ್ತಾರೆ. ಆದ್ದರಿಂದ ಸದರಿಯವರ ವಿರುದ್ಧ ಕ್ರಮ ಜರುಗಿಸಬೇಕೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಶಿವಮೊಗ್ಗ ಜಿಲ್ಲೆ ಕರ್ನಾಟಕ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕ (ಇನ್ನು ಮುಂದೆ "ತನಿಖಾಧಿಕಾರಿಗಳು" ಎಂದು ಕರೆಯಲ್ಪಡುತ್ತಾರೆ) ರನ್ನು ಕೇಳಲಾಗಿ, ಸದರಿಯವರು ತಮ್ಮ ತನಿಖಾ ವರದಿಯಲ್ಲಿ -

ಎದುರುದಾರರು ದಿನಾಂಕ:27.7.1994ರಂದು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಗೆ, ಪೊಲೀಸ್ ಉಪನಿರೀಕ್ಷಕರಾಗಿ ಕರ್ತವ್ಯಕ್ಕೆ ಸೇರಿದ್ದು, ಸದರಿಯವರ ಪತ್ನಿ ಶ್ರೀಮತಿ.ಭಾಗ್ಯ ರವರು ಜಗಳೂರು ತಾಲ್ಲೂಕಿನ ಮರೇನಹಳ್ಳಿಯ ವಾಸಿ ಶ್ರೀ.ನಾಗೇಂದ್ರಪ್ಪ ರವರ ಒಬ್ಬಳೇ ಮಗಳಾಗಿದ್ದು, ಸದರಿ ಶ್ರೀ.ನಾಗೇಂದ್ರಪ್ಪ ನವರು ಈ

ಹಿಂದೆ ಜಿಲ್ಲಾ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರಿಗೆ ಪಿತ್ರಾರ್ಜಿತವಾಗಿ 35 ಎಕರೆ ಜಮೀನಿದ್ದು, ಸದರಿಯವರು ನಿವೃತ್ತಿ ಹೊಂದಿದ ನಂತರ ಬಂದ ಹಣದಲ್ಲಿ 2004ನೇ ಸಾಲಿನಲ್ಲಿ ದಾವಣಗೆರೆಯ ಶಿವಕುಮಾರ ಬಡಾವಣೆಯಲ್ಲಿ ಖರೀದಿ ಮಾಡಿದ ನಾಲ್ಕು ನಿವೇಶನಗಳನ್ನು (ತಲಾ ಅಳತೆ 30X30 ಅಡಿಗಳು) ತನ್ನ ಮಗಳಿಗೆ ದಾನಪತ್ರದ ಮುಖಾಂತರ ಕೊಟ್ಟಿದ್ದಾರೆ. ಎದುರುದಾರರ ಅಜ್ಜನ ತಂದೆಯ ಹೆಸರಿನಲ್ಲಿ ಒಟ್ಟು 36 ಎಕರೆ 5 ಗುಂಟೆ ಜಮೀನು ಹರಪನಹಳ್ಳಿ ತಾಲ್ಲೂಕು, ಓಬಳಾಪುರದ ಬೇರೆ ಬೇರೆ ಸರ್ವೆ ನಂಬರ್‌ಗಳಲ್ಲಿ ಇರುತ್ತದೆ. ಎದುರುದಾರರಿಗೆ ಮೂರು ಜನ ಮಕ್ಕಳಿದ್ದು, ಮಗಳಾದ ಕು: ಮೇಘನಾ ರವರು ಬೆಂಗಳೂರಿನ ರಾಮಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ., 7ನೇ ಸೆಮಿಸ್ಟರ್‌ನಲ್ಲಿ ಹಾಗೂ ಮಗ ಶ್ರೀ.ಮನೋಜ್ ರವರು ಎಸ್.ಐ.ಟಿ., ಸಿದ್ಧಗಂಗಾ ಕಾಲೇಜು ತುಮಕೂರಿನಲ್ಲಿ, ಬಿ.ಇ., 3ನೇ ಸೆಮಿಸ್ಟರ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇನ್ನೊಬ್ಬ ಮಗ ಶ್ರೀ.ಯಶವಂತ್ ಇವರು ಪಿ.ಯು.ಸಿ., ಯಲ್ಲಿ ಅನುತ್ತೀರ್ಣರಾಗಿ ಪ್ರಸ್ತುತ ಮನೆಯಲ್ಲಿಯೇ ಇರುತ್ತಾರೆ. ಎದುರುದಾರರು ಮತ್ತು ಅವರ ಪತ್ನಿಯ ಬಳಿ ₹2,50,000/-ಗಳು ಬೆಲೆ ಬಾಳುವ 100 ಗ್ರಾಂ ಬಂಗಾರದ ಆಭರಣಗಳು ಇರುವುದಾಗಿ ಮಾಹಿತಿ ತಿಳಿದು ಬಂದಿದೆ. ಎದುರುದಾರರ ಪತ್ನಿಗೆ ಅವರ ತಂದೆಯಿಂದ ಬಂದಂತಹ ಮನೆಯನ್ನು ಹೊರತುಪಡಿಸಿದರೆ, ಎದುರುದಾರರು ಮತ್ತು ಅವರ ಪತ್ನಿ ಮತ್ತು ಅವರ ಮಕ್ಕಳ ಹೆಸರಿನಲ್ಲಿ ಯಾವುದೇ ಸ್ಥಿರ ಮತ್ತು ಚರಾಸ್ತಿಗಳು ಇರುವುದು ಕಂಡು ಬಂದಿಲ್ಲವೆಂದು ಹೇಳಿದ್ದಾರೆ.

4. ತನಿಖಾಧಿಕಾರಿಗಳ ವರದಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಮ್ಮ ಮಾವನವರು ತಮ್ಮ ಪತ್ನಿಯ ಹೆಸರಿಗೆ ದಾವಣಗೆರೆಯ ನಗರಸಭೆಯ ವ್ಯಾಪ್ತಿಯಲ್ಲಿರುವ ನಾಲ್ಕು ನಿವೇಶನಗಳನ್ನು ದಿನಾಂಕ:15.7.2004ರಂದು ಕ್ರಯ ಪತ್ರ ನೋಂದಣಿ ಮಾಡಿಸಿಕೊಟ್ಟಿದ್ದಾರೆ. ಸದರಿ ಆಸ್ತಿಗಳನ್ನು ವಾರ್ಷಿಕ ಆಸ್ತಿ ಘೋಷಣೆ ನಮೂನೆಯಲ್ಲಿ ವಿವರಿಸಿ ಸರ್ಕಾರ/ಇಲಾಖೆಗೆ ಘೋಷಣೆ ಮಾಡಿಕೊಂಡಿದೆ. ತಾವು 2004ನೇ ಸಾಲಿನಲ್ಲಿ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ, ಸಮುಚಿತ ಮಾರ್ಗದಲ್ಲಿ ಮತ್ತು ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾ ನಿರೀಕ್ಷಕರು, ಪ್ರಧಾನ ಕಚೇರಿ, ಬೆಂಗಳೂರು ಇವರಲ್ಲಿ ಅನುಮತಿ ನೀಡುವಂತೆ ನಿವೇದಿಸಿಕೊಂಡಿದ್ದು, ಅನುಮತಿ ನೀಡದ ಕಾರಣ, ಮನವಿ ಸಲ್ಲಿಸಿದ ಆರು ತಿಂಗಳುಗಳ ಒಳಗಾಗಿ ಅನುಮತಿ ನೀಡದೇ ಇದ್ದ ಪಕ್ಷದಲ್ಲಿ ಅನುಮತಿ ನೀಡಿದ್ದಾರೆಂದು ಭಾವಿಸಿರುತ್ತೇನೆ. ದೂರುದಾರರು ಸುಳ್ಳು ದೂರನ್ನು ಸಲ್ಲಿಸಿದ್ದಾರೆಂದು ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

BD/2778/17



1) ಎದುರುದಾರರು ದಿನಾಂಕ:27.7.1994ರಂದು ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆಗೆ ಪೋಲೀಸ್ ಉಪನಿರೀಕ್ಷಕರಾಗಿ ಕರ್ತವ್ಯಕ್ಕೆ ಸೇರಿದ್ದಾರೆ;

2) ಎದುರುದಾರರ ಪತ್ನಿ ಶ್ರೀಮತಿ.ಹೆಚ್.ಎನ್.ಭಾಗ್ಯ ರವರಿಗೆ ಅವರ ತಂದೆ ಶ್ರೀ.ಚಂದ್ರಪ್ಪ ರವರು ದಿನಾಂಕ:15.7.2004ರ ದಾನ ಪತ್ರದಲ್ಲಿ ₹1,80,000/-ವನ್ನು ದಾನವಾಗಿ ನೀಡಿದ್ದು, ಸದರಿ ಹಣವನ್ನು ನಿಟುವಳ್ಳಿ ಗ್ರಾಮದ ರಿ.ಸರ್ವೆ ನಂ:39/2ಎ, 2ಡಿ ಮತ್ತು 39/2ಎ, 2ಸಿ ರಲ್ಲಿ ವಿಂಗಡಿಸಿರುವ ತಲಾ 30X30 ಅಡಿಗಳ ನಾಲ್ಕು ನಿವೇಶನಗಳನ್ನು ಖರೀದಿಸಲು ನೀಡಿರುವುದಾಗಿ ದಾನ ಪತ್ರದ ಪ್ರತಿಯಲ್ಲಿ ಕಂಡು ಬಂದಿದೆ. ಸದರಿ ಹಣದಿಂದ ಎದುರುದಾರರ ಪತ್ನಿ ಅದೇ ದಿನ, ಅಂದರೆ ದಿನಾಂಕ:15.7.2004ರಂದು ಎರಡು ನೋಂದಾಯಿತ ಕ್ರಯ ಪತ್ರಗಳ ಮುಖೇನ ನಾಲ್ಕು ನಿವೇಶನಗಳನ್ನು ಶ್ರೀ.ಬಿ.ಸಿ.ಉಮಾಪತಿ ಬಿನ್ ಬಿ.ಚನ್ನಬಸವಪ್ಪ ರವರಿಂದ ಖರೀದಿಸಿರುವುದು ಕ್ರಯ ಪತ್ರಗಳ ಪ್ರತಿಯಲ್ಲಿ ಕಂಡು ಬಂದಿದೆ;

3) ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು, ಚಿಗಟೇರಿ ಹೋಬಳಿ, ಮುತ್ತಿಗಿ ಗ್ರಾಮದ ಸರ್ವೆ ನಂ.279ರಲ್ಲಿ 14 ಎಕರೆ 29 ಗುಂಟೆ, ಸರ್ವೆ ನಂ.230/ಬಿ ರಲ್ಲಿ 5 ಎಕರೆ 6 ಗುಂಟೆ, ಸರ್ವೆ ನಂ.247/1ರಲ್ಲಿ 150 ಗುಂಟೆ, ಸರ್ವೆ ನಂ.219/ಎ2 ಎರಡು ಎಕರೆ 37 ಗುಂಟೆ, ಸರ್ವೆ ನಂ.40/ಚ ನಲ್ಲಿ 80 ಗುಂಟೆ, ಸರ್ವೆ ನಂ.228/ಎ ರಲ್ಲಿ 8 ಎಕರೆ 28.5 ಗುಂಟೆ ಮತ್ತು ಸರ್ವೆ ನಂ.230/3ರಲ್ಲಿ 5 ಎಕರೆ 6 ಗುಂಟೆ ಜಮೀನುಗಳು ಎದುರುದಾರರ ತಾಯಿ ಶ್ರೀಮತಿ.ಕೆಂಚಮ್ಮ ಮತ್ತು ಇತರರ ಹೆಸರಿನಲ್ಲಿದ್ದು, ಅವೆಲ್ಲವೂ ಎದುರುದಾರರ ಒಟ್ಟು ಕುಟುಂಬದ ಸ್ವತ್ತುಗಳು ಎಂದು ಕಂಡು ಬಂದಿದೆ;

4) ಎದುರುದಾರರು ಸರ್ಕಾರಿ ಸೇವೆಗೆ ಸೇರಿದ ನಂತರ ಸದರಿಯವರ ಪತ್ನಿ ತಮ್ಮ ತಂದೆಯಿಂದ ₹1,80,000/- ಹಣವನ್ನು ದಿನಾಂಕ:15.7.2004ರಂದು ದಾನ ರೂಪದಲ್ಲಿ ಪಡೆದುಕೊಂಡು ಅದೇ ದಿನ ನಾಲ್ಕು ನಿವೇಶನಗಳನ್ನು ಖರೀದಿಸಿದ್ದು, ನಗದು ಹಣವನ್ನು ದಾನವಾಗಿ ಪಡೆಯುವ ಪೂರ್ವದಲ್ಲಿ ಎದುರುದಾರರು ಸರ್ಕಾರದಿಂದ/ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿಲ್ಲವೆಂದು ಸ್ಪಷ್ಟವಾಗಿ ಕಂಡು ಬಂದಿದೆ. ನಿವೇಶನಗಳನ್ನು ಖರೀದಿಸಲು ₹1,80,000/- ಹಣವನ್ನು ದಾನವಾಗಿ ನೀಡಲಾಗುತ್ತಿದೆಯೆಂದು ದಾನ ಪತ್ರದಲ್ಲಿ ಹೇಳಿದೆ. ಆದರೆ, ಎದುರುದಾರರು ತಮ್ಮ ಇಲಾಖೆಗೆ/ಸರ್ಕಾರಕ್ಕೆ ಸಲ್ಲಿಸದ ಸ್ಥಿರಾಸ್ತಿಗಳ ಪಟ್ಟಿಯಲ್ಲಿ, ಸದರಿ ನಿವೇಶನಗಳನ್ನು ತಮ್ಮ ಪತ್ನಿಗೆ ತಮ್ಮ ಮಾವ ನಿವೃತ್ತರಾದಾಗ ಕಾಣಿಕೆಯಾಗಿ ಕೊಟ್ಟಿದ್ದಾರೆಂದು ಹೇಳಿದೆ. ಮುಂದುವರೆದು, ಎದುರುದಾರರು ತಮ್ಮ ಇಲಾಖೆಗೆ/ಸರ್ಕಾರಕ್ಕೆ ಸಲ್ಲಿಸಿದ ಚರಾಸ್ತಿಗಳ ವಿವರಗಳಲ್ಲಿ, 1994 ರಿಂದ 2004ರ ವರೆಗಿನ ಅವಧಿಯಲ್ಲಿ 710 ಗ್ರಾಂ ಬಂಗಾರದ ಒಡವೆಗಳು ಮತ್ತು ರೂಪಾಯಿ ಎರಡು ಲಕ್ಷ ಬೆಲೆಯ ಮನೆ ಬಳಕೆ ಸಾಮಾನುಗಳನ್ನು ಖರೀದಿಸಿದ್ದಾರೆ ಎಂದು ಹೇಳಿದೆ ಹಾಗೂ 1999ನೇ ಇಸವಿಯಲ್ಲಿ ನಾಲ್ಕುವರೆ ಲಕ್ಷ ರೂಪಾಯಿ (3 ಲಕ್ಷ ರೂಪಾಯಿ ಎಂದು 2007-08ರ ವರ್ಷಾಂತ್ಯಕ್ಕೆ ಸಲ್ಲಿಸಿದ ಚರಾಸ್ತಿಗಳ ವಿವರದಲ್ಲಿ ಮತ್ತು ಒಂದು ಲಕ್ಷ ಎಂದು 2009-10ನೇ ವರ್ಷಾಂತ್ಯಕ್ಕೆ ಸಲ್ಲಿಸಿದ ಚರಾಸ್ತಿಗಳ ವಿವರದಲ್ಲಿ

N. Anand

ತೋರಿಸಿದ್ದಾರೆ) ಮೌಲ್ಯದ ಟ್ರ್ಯಾಕ್ಟರ್‌ನ್ನು ಹರಪನಹಳ್ಳಿ ಪಿ.ಎಲ್.ಡಿ. ಬ್ಯಾಂಕ್ ನಿಂದ ಸಾಲ ಮಾಡಿ ಖರೀದಿಸಿದ್ದಾರೆಂದು ಹೇಳಿದೆ. 2003-04ನೇ ಸಾಲಿನಲ್ಲಿ 140 ಗ್ರಾಂ ಬಂಗಾರದ ಒಡವೆಗಳನ್ನು ಎದುರುದಾರರ ಮಾವನವರು ಮೊಮ್ಮಕ್ಕಳಿಗೆ ಉಡುಗೊರೆಯಾಗಿ ಕೊಟ್ಟಿದ್ದಾರೆಂದು ಎದುರುದಾರರು ಘೋಷಿಸಿದ್ದಾರೆ;

5) ಬ್ಯಾಂಕಿನಲ್ಲಿ ಸಾಲ ಪಡೆದು ಟ್ರ್ಯಾಕ್ಟರನ್ನು ಖರೀದಿಸುವ ಬಗ್ಗೆ ಎದುರುದಾರರು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದ ಬಗ್ಗೆ ದಾಖಲೆಗಳಿಲ್ಲ. ತನ್ನ ಕುಟುಂಬದ ಸದಸ್ಯರು ಬೇರೆಯವರಿಂದ ನಗದು/ಒಡವೆಗಳನ್ನು ದಾನ ಪಡೆಯುವ ಬಗ್ಗೆ ಎದುರುದಾರರು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದ ಬಗ್ಗೆ ದಾಖಲೆಗಳಿಲ್ಲ. ಆದ್ದರಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವೆಗಳು(ನಡತೆ) ನಿಯಮಗಳು, 1966ರ ನಿಯಮಗಳನ್ನು ಉಲ್ಲಂಘಿಸಿ ಸರ್ಕಾರಿ ನೌಕರನಿಗೆ ತರವಲ್ಲದ ರೀತಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ವರದಿ ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

7. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

8. ಅದಲ್ಲದೆ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರದಾರರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965 ರಡಿ ಕ್ರಮ ವಹಿಸಲು ಆದೇಶಿಸಿದೆ.

UPLOK-2/DE/2278/17



9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Ananda 3/7

(ನ್ಯಾಯಾಮೂರ್ತಿ ಎನ್.ಆನಂದ)

ಉಪಲೋಕಾಯುಕ್ತ,

ಕರ್ನಾಟಕ ರಾಜ್ಯ.

3/7